153 ಸೆ 6 ನಿ=330 (30)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 330 ರ ಮೇರೆಗೆ ಪ್ರಸ್ತಾಪಿಸಲಾದ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ:**

**ಬೆಂಗಳೂರಿನಲ್ಲಿ ಜೋರು ಮಳೆ ಸುರಿದಾಗಲೆಲ್ಲಾ ರಾಜಕಾಲುವೆಗಳು ಉಕ್ಕಿ ಹರಿದು ಅನಾಹುತಗಳಾಗುತ್ತಿವೆ. ಈ ಅನಾಹುತಗಳ ತಡೆಗಾಗಿ ಕೈಗೆತ್ತಿಕೊಳ್ಳುತ್ತಿರುವ ರಾಜಕಾಲುವೆಗಳ ಅಭಿವೃದ್ಧಿ ಹೂಳು ತೆರವು ಕಾಮಗಾರಿಗಳಲ್ಲೂ ಕೋಟಿಗಟ್ಟಲೆ ಲಪಟಾಯಿಸಲಾಗುತ್ತಿದೆ. ಕಾಮಾಕ್ಷಿಪಾಳ್ಯ ವಾರ್ಡ್‌ನ ಕೆಂಪೇಗೌಡ ಮೈದಾನದಿಂದ ಮಾಗಡಿ ಮುಖ್ಯರಸ್ತೆವರೆಗೆ ಆರ್‌ಸಿಸಿ ಬಾಕ್ಸ್ ಡ್ರೈನ್ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ 1.70 ಕೋಟಿ ರೂ.ಗಳನ್ನು ಗುತ್ತಿಗೆದಾರನಿಗೆ ಆಫ್‌ಲೈನ್ ಮೂಲಕ ಪಾವತಿಸಲಾಗಿದೆ. ಮತ್ತೆ ಇದೇ ಕಾಮಗಾರಿಗೆ ಪುನಃ ಆನ್‌ಲೈನ್ ಮೂಲಕ ಪಾವತಿಸಿ ಅಕ್ರಮವೆಸಗಲಾಗಿದೆ. ಇದೇ ರೀತಿಯಾಗಿ ಅನುಮೋದನೆ ಪಡೆಯದೆ ಅಕ್ರಮಗಳು, ಬೇರೆ ಗುತ್ತಿಗೆದಾರರಿಗೆ 31.87 ಕೋಟಿ ರೂ. ಪಾವತಿ ಇದಲ್ಲದೇ ಹೂಳು ವಿಲೇವಾರಿಗೆ ದಾಖಲೆಯೇ ಇಲ್ಲ. ಈ ವಿಷಯವು ಸಾರ್ವಜನಿಕ ಮಹತ್ವದಾಗಿರುವುದರಿಂದ ಈ ವಿಷಯವನ್ನು ನಿಯಮ 330 ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೋರುತ್ತೇನೆ.**

* * * * *

ಕಾಮಾಕ್ಷಿಪಾಳ್ಯ ವಾರ್ಡಿನ ಕೆಂಪೇಗೌಡ ಮೈದಾನದಿಂದ ಮಾಗಡಿ ಮುಖ್ಯರಸ್ತೆವರೆಗೆ ಆರ್‌ಸಿಸಿ ಬಾಕ್ಸ್ ಡ್ರೈನ್ ನಿರ್ಮಾಣ ಕಾಮಗಾರಿಗೆ ಸಂಬಂಧ ಮುಖ್ಯ ಲೆಕ್ಕಪರಿಶೋಧಕರಿಗೆ ವರದಿಯನ್ನು ನೀಡಲಾಗಿರುತ್ತದೆ. ಸದರಿ ಕಾಮಗಾರಿ Construction of RCC Box drain from Kempegowda ground to magadi main road in Kamakshipalya ward no 101 ಅನ್ನು ಗುತ್ತಿಗೆದಾರರಾದ ಶ್ರೀ ಇ.ಪಾಂಡುರಂಗರವರಿಗೆ ಕಾರ್ಯಾದೇಶ ನೀಡಿ ಕಾಮಗಾರಿ ದಿನಾಂಕ: 16.08.2019ರಂದು ಪೂರ್ಣಗೊಂಡಿರುತ್ತದೆ. ಈ ಸಂಬಂಧ ಗುತ್ತಿಗೆದಾರರಿಗೆ ಕಾಮಗಾರಿಯ ಪೂರ್ಣ ಬಿಲ್ಲಿನ ಮೊತ್ತ ರೂ.1,62,70,500.00 ಗಳು ವೋಚರ್ ನಂ.01, ದಿನಾಂಕ:04–05–2020 ರಂದು ಪಾವತಿ ಆಗಿರುತ್ತದೆ.

ಸದರಿ ಕಾಮಗಾರಿಗೆ ಮುಖ್ಯ ಲೆಕ್ಕಾಧಿಕಾರಿರವರ ಕಛೇರಿಯಿಂದ ಎರಡನೇ ಬಾರಿ ಶ್ರೀ ಇ.ಪಾಂಡುರಂಗ ಗುತ್ತಿಗೆದಾರರಿಗೆ ದಿನಾಂಕ:10–03–2022 ರಂದು ರೂ.1,62,70,500.00 ಗಳ ಮೊತ್ತ ಪಾವತಿಯಾಗಿರುತ್ತದೆ. ಸದರಿ ಮೊತ್ತವು ಮುಖ್ಯ ಲೆಕ್ಕಾಧಿಕಾರಿ ಕಛೇರಿಯಲ್ಲಿ ಐ.ಎಫ್.ಎಂ.ಎಸ್ ತಂತ್ರಾಂಶದಲ್ಲಿ ತಾಂತ್ರಿಕ ದೋಷದಿಂದಾಗಿ ಪಾವತಿಯಾಗಿರುತ್ತದೆ ಎಂದು ಮುಖ್ಯ ಲೆಕ್ಕಾಧಿಕಾರಿಗಳ ಪತ್ರದ ಸಂಖ್ಯೆ: 3359, ದಿನಾಂಕ:15–03–2022 ರಂದು ಸದರಿ ಗುತ್ತಿಗೆದಾರರಿಗೆ ಸೂಕ್ತ ನಿರ್ದೇಶನ ನೀಡಿ ಸಂಬಂಧಪಟ್ಟ ಮುಖ್ಯ ಆಯುಕ್ತರವರ ಖಾತೆಗೆ ಮರು ಜಮೆ ಮಾಡಲು ಸೂಚಿಸಿರುತ್ತಾರೆ. ಸದರಿ ಸೂಚನೆಯಂತೆ ಗುತ್ತಿಗೆದಾರರು ಮುಖ್ಯ ಆಯುಕ್ತರವರ ಖಾತೆಗೆ ಮೊತ್ತವನ್ನು ಮರು ವರ್ಗಾಯಿಸಿರುತ್ತಾರೆ.

ಸದರಿ ಮೊತ್ತಕ್ಕೆ ಸಂಬಂಧಪಟ್ಟ ಕಾಮಗಾರಿಯ ಶಾಸನಬದ್ಧ ಕಟಾವಣೆಗಳನ್ನು ದಿನಾಂಕ: 05–04–2022 ರಂದು ಮುಖ್ಯ ಆಯುಕ್ತರು, ಜಯನಗರ, ಕೆನರಾಬ್ಯಾಂಕ್, ಜಯನಗರ 3ನೇ ಬ್ಲಾಕ್, ಶಾಖೆಗೆ ರೂ.7,37,820.00 ಮೊತ್ತವು ವರ್ಗಾವಣೆಯಾಗಿದ್ದು, ಸದರಿ ಮೊತ್ತವನ್ನು ಮುಖ್ಯ ಆಯುಕ್ತರವರ ಸಂಬಂಧಪಟ್ಟ ಖಾತೆ ಸಂಖ್ಯೆ: 8401132000034ಗೆ ಮರು ಜಮೆ ಮಾಡಲಾಗಿರುತ್ತದೆ. ಒಟ್ಟು ರೂ.1,70,08,320.00 ಮೊತ್ತವು ಪಾಲಿಕೆಗೆ ಮರು ಪಾವತಿಯಾಗಿರುವುದರಿಂದ ಮತ್ತು ತಾಂತ್ರಿಕ ದೋಷದ ಕಾರಣ ಸದರಿ ಆಕ್ಷೇಪಣೆಯನ್ನು ಕೈಬಿಡಲು ಈ ಮೂಲಕ ಮುಖ್ಯ ಲೆಕ್ಕಪರಿಶೋಧಕರಿಗೆ ಕೋರಲಾಗಿರುತ್ತದೆ.

. . . . . 2 .

ಇದೇ ರೀತಿಯಾಗಿ ಅನುಮೋದನೆ ಪಡೆಯದೇ ಬೇರೆ ಗುತ್ತಿಗೆದಾರರಿಗೆ ರೂ.31.87 ಕೋಟಿ ಪಾವತಿಯಾಗಿದೆ. ಹೂಳು ವಿಲೇವಾರಿಗೆ ದಾಖಲೆಯೇ ಇಲ್ಲವೆಂಬ ವಿಷಯಕ್ಕೆ ಸಂಬಂಧಿಸಿದಂತೆ ಪಾಲಿಕೆಯ ವ್ಯಾಪ್ತಿಯಲ್ಲಿ ಈ ಹಿಂದೆ ತಡೆಗೋಡೆ ಸಹಿತವಾಗಿರುವ ರಾಜಕಾಲುವೆಗಳ ಉದ್ದವು 440.0 ಕಿ.ಮೀಗಳಿದ್ದು, ತಡೆಗೋಡೆ ಸಹಿತ ಇರುವ ರಾಜಕಾಲುವೆಗಳನ್ನು ವಾರ್ಷಿಕ ನಿರ್ವಹಣಾ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಸದರಿ ಯೋಜನೆಯನ್ನು ಏಪ್ರಿಲ್ 2019 ರಿಂದ ಮಾರ್ಚ್ 2022 ರವರೆಗೆ ಗುತ್ತಿಗೆದಾರರಾದ ಮೆ॥ ಯೋಗಾ ಅಂಡ್ ಕೋ ರವರು ಕಾರ್ಯದೇಶವನ್ನು ಪಡೆದು ರಾಜಕಾಲುವೆಗಳಲ್ಲಿನ ಹೂಳು ತೆಗೆಯುವ ಕಾಮಗಾರಿಯನ್ನು ನಿರ್ವಹಿಸಿದ್ದು, ಸದರಿ ಯೋಜನೆಯು ಪ್ರಸ್ತುತ ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಯ ಗುತ್ತಿಗೆಯ ವಾರ್ಷಿಕ ಮೊತ್ತ ರೂ.36.63 ಕೋಟಿಗಳಿಗೆ ನೀಡಲಾಗಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ. ಕಾಮಗಾರಿಯ ಗುತ್ತಿಗೆಯಲ್ಲಿ ನ್ಯೂನ್ಯತೆಗಳು ಕಂಡುಬಂದಾಗ ದಂಡವನ್ನು ಸಹ ಹಾಕಲಾಗಿರುತ್ತದೆ.

ಸದರಿ ಕಾಮಗಾರಿಯು ನಿರ್ವಹಣಾ ಕಾಮಗಾರಿಯಾಗಿದ್ದು, ಪ್ರತಿ ಮಾಹೆಯಲ್ಲಿ ನಿರ್ವಹಿಸಿದ್ದ ಕಾಮಗಾರಿಗಳಿಗೆ ದಾಖಲೆಗಳನ್ನು ನಿಗಧಿತ ಕಾರ್ಯವಿಧಾನದಂತೆ ಕಾಮಗಾರಿಯ ಪ್ರಾರಂಭಿಕ ಪೂರ್ವದ ಮತ್ತು ನಂತರದ ಜಿ.ಪಿ.ಎಸ್ ಸಹಿತ ಛಾಯಾಚಿತ್ರಗಳ ದಾಖಲೆಗಳನ್ನು ವಿಧಾನಸಭಾ ಕ್ಷೇತ್ರವಾರು ಆಧಾರದಲ್ಲಿ ಬಿಲ್ಲುಗಳನ್ನು ಸಲ್ಲಿಸಲಾಗಿರುತ್ತದೆ. ಸದರಿ ಕಾಮಗಾರಿಯ ಆರ್ಥಿಕ ಶಿಸ್ತು/ಹಿಡಿತಕ್ಕಾಗಿ ಜಾಬ್‌ಕೋಡ್ ಅಡಿಯಲ್ಲಿಯೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಬಿಲ್ ಪಾವತಿಸಲಾಗಿರುತ್ತದೆ.

---

**ಸಂಖ್ಯೆ: ನಅಇ 344 ಎಂಎನ್‌ವೈ 2024 (ಇ)**

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ